# ಯಾವುದು ಹೆಚ್ಚಿನದು ?

## (ಭೂಮವಿದ್ಯೆ - ಛಾಂದೋಗ್ಯೋಪನಿಷತ್ತು)

ಭಾಗ ೧

ಸ್ವಾಮಿ ವೀರೇಶಾನಂದ

**ಈ** ಕಥೆ ಛಾಂದೋಗ್ಯ ಉಪನಿಷತ್ತಿನ ಏಳನೆಯ ಅಧ್ಯಾಯದಲ್ಲಿ ಬರುತ್ತದೆ. ಭೂಮವಿದ್ಯೆಯನ್ನು ಉಪನಿಷತ್ತು ನಮಗೆ ಇದರ ಮೂಲಕ ತಿಳಿಸಿಕೊಡುತ್ತದೆ. ದೇವರ್ಷಿ ನಾರದನು ಇಲ್ಲಿ ವಿದ್ಯಾರ್ಥಿ. ಸನತ್ಕುಮಾರನೆಂಬ ಮಹರ್ಷಿ ಇಲ್ಲಿ ಆಚಾರ್ಯ. ದೇವರ್ಷಿಯೂ ಮಹಾಭಕ್ತನೂ ಆದ ನಾರದನಿಗೇ ದುಃಖ ದುಮ್ಮಾನಗಳು ಬಂದಿದ್ದವು. ಅದನ್ನು ಇಲ್ಲಿ ಅವನು ಹೃದಯಂಗಮವಾಗಿ ತೋಡಿಕೊಳ್ಳುತ್ತಾನೆ. ತನ್ನ ಗುರುವಿನಿಂದ ಸೂಕ್ತ ಉಪದೇಶವನ್ನು ಪಡೆದುಕೊಳ್ಳುತ್ತಾನೆ.

ನಾರದನು ಸನತ್ಕುಮಾರನ ಬಳಿಗೆ ಬಂದನು. ''ಭಗವಂತನೇ ತಿಳಿಸಿಕೊಡಬೇಕು'' ಎಂದು ಕೇಳಿಕೊಂಡನು. ಗುರುವು ಬಹಳ ಉತ್ತಮಮಟ್ಟದ ಯೋಗಿಯಾಗಿದ್ದನು. ಅಲ್ಲದೆ, ಬ್ರಹ್ಮಿಷ್ಠನಾಗಿದ್ದನು. ಅವನ ಉತ್ತರ ಮನೋಜ್ಞವಾಗಿತ್ತು : ''ಅಪ್ಪಾ, ನಾರದ, ಇದುವರೆಗೂ ಆತ್ಮತತ್ತ್ವದ ವಿಷಯದಲ್ಲಿ ನೀನು ಏನು ತಾನೇ ತಿಳಿದುಕೊಂಡಿರುವೆ? ಅದನ್ನು ಹೇಳುವುದರ ಮೂಲಕ ನನ್ನನ್ನು ಸಮೀಪಿಸು. ಆತ್ಮದ ಬಗ್ಗೆ ನಿನಗೆ ಏನು ಗೊತ್ತೋ ಅದನ್ನೆಲ್ಲ ನನಗೆ ಹೇಳು. ಇದಕ್ಕಿಂತ ಹೆಚ್ಚಿನದು ಏನಾದರೂ ಇದೆಯೇ ಎನ್ನುವುದನ್ನು ಗೊತ್ತುಮಾಡಿಕೊಂಡು, ಅದನ್ನು ನಾನು ಉಪದೇಶ ಮಾಡುತ್ತೇನೆ. ಇದೇ ನಾನು ನಿನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವ ವಿಧಾನ.''

ನಾರದನು ತನಗೆ ಗೊತ್ತಿರುವ ವಿಷಯಗಳ ದೊಡ್ಡ ಪಟ್ಟಿಯನ್ನೇ ಮಾಡಲು ತೊಡಗಿದನು. ''**ಋಗ್ವೇದಂ ಭಗವಃ ಅಧ್ಯೇಮಿ...**'' ಎಂದು ಹೇಳಲು ಆರಂಭಿಸಿದನು. ''ಭಗವಂತನೇ, ನಾನು ಋಗ್ವೇದವನ್ನು ಅಧ್ಯಯನ ಮಾಡಿದ್ದೇನೆ. ಯಜುರ್ವೇದವನ್ನು, ಸಾಮವೇದವನ್ನು, ಅಥರ್ವಣವೇದವನ್ನು — ಹೀಗೆ ಎಲ್ಲ ವೇದಗಳನ್ನೂ ಅಧ್ಯಯನ ಮಾಡಿದ್ದೇನೆ. ಅದೇ ರೀತಿ, ಇತಿಹಾಸ, ಪುರಾಣಗಳನ್ನು ಕೂಡ ಅರಗಿಸಿಕೊಂಡಿದ್ದೇನೆ. ವೇದಗಳನ್ನು ತಿಳಿದುಕೊಳ್ಳಲು ಆವಶ್ಯಕವಾದ ವ್ಯಾಕರಣವೂ ನನಗೆ ಕರತಲಾಮಲಕವಾಗಿದೆ. ಶ್ರಾದ್ಧಕಲ್ಪ, ಗಣಿತ, ಶಕುನಶಾಸ್ತ್ರ, ನಿಧಿಶಾಸ್ತ್ರ ತರ್ಕಶಾಸ್ತ್ರ — ಇವುಗಳನ್ನು ಕೂಡ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಇಲ್ಲದೆ, ನೀತಿಶಾಸ್ತ್ರ, ನಿರುಕ್ತ (ಪದಗಳ ಅರ್ಥ ನಿರ್ಧಾರ ಮಾಡುವ ಶಾಸ್ತ್ರ), ವೇದಗಳಲ್ಲಿ ಉಕ್ತವಾದ ಬ್ರಹ್ಮವಿದ್ಯೆ, ವೇದಾಂಗಗಳಾದ ಶಿಕ್ಷಾ, ಕಲ್ಪ, ಛಂದೋಶಾಸ್ತ್ರ ಮುಂತಾದವು — ಇವೆಲ್ಲವನ್ನೂ ಅರಿತುಕೊಂಡಿದ್ದೇನೆ. ಇಷ್ಟುಮಾತ್ರವಲ್ಲ, ಭೂತವಿದ್ಯೆ, ಧನುರ್ವೇದ, ಜ್ಯೌತಿಷ, ಸರ್ಪವಿದ್ಯೆ ಅಥವಾ ಗರುಡ ವಿದ್ಯೆ (ಸರ್ಪಗಳನ್ನು ವಶೀಕರಿಸಿಕೊಳ್ಳುವ ವಿದ್ಯೆ), ಪರಿಮಳ ದ್ರವ್ಯಗಳನ್ನು ತಯಾರು ಮಾಡುವ ವಿದ್ಯೆ, ನೃತ್ಯ, ಸಂಗೀತ, ವಾದ್ಯಗಳ ವಿದ್ಯೆ, ಶಿಲ್ಪವೇ ಮುಂತಾದ ಕುಶಲಕಲೆಗಳು — ಇವುಗಳಲ್ಲಿಯೂ ನಾನು ಪರಿಣತನಾಗಿದ್ದೇನೆ.''

ಇಷ್ಟೆಲ್ಲ ವಿದ್ಯೆಗಳನ್ನು ಅರಿತ ಮೇಲೆ ಇನ್ನೇನು ಕಲಿಯುವುದು ಉಳಿದಿದೆ ಎಂದು ಕೇಳುವಿರೋ? ನಾರದನು ಮುಂದೆ ಹೇಳುವುದನ್ನು ಕೇಳಿ: ''ಇಷ್ಟೊಂದು ವಿಷಯಗಳನ್ನು ಕಲಿತಿದ್ದರೂ, '**ಸೋಽಹಂ ಭಗವೋ ಮಂತ್ರವಿದೇವಾಽಸ್ಮಿ ನಾಽಽತ್ಮವಿತ್**' – ಭಗವಂತನೇ, ನಾನು ಮಂತ್ರವಿದನಾಗಿದ್ದೇನೆಯೇ ಹೊರತು, ಆತ್ಮವನ್ನು ನಾನು ತಿಳಿದುಕೊಂಡಿಲ್ಲ.'' ಇದರ ಅರ್ಥ ನಾನು ಶಬ್ದಗಳ ಅರ್ಥವನ್ನು ಮಾತ್ರವೇ ತಿಳಿದುಕೊಂಡಿದ್ದೇನೆ. ಮಂತ್ರಗಳನ್ನು ತಿಳಿದುಕೊಂಡು, ಮಂತ್ರಗಳು ಎಲ್ಲಿ ಉಪಯೋಗವಾಗುತ್ತವೆಯೋ, ಆ ಕರ್ಮಗಳನ್ನು ಮಾತ್ರ ನಾನು ಬಲ್ಲೆನು. ಆದರೆ ನಾನು ಆತ್ಮವನ್ನು ಸರಿಯಾಗಿ ತಿಳಿದುಕೊಂಡಿಲ್ಲ.

ಮುಂದುವರೆದು ನಾರದನು ತನ್ನ ಮನಸ್ಸಿನ ಸ್ಥಿತಿಯನ್ನು ತೋಡಿಕೊಳ್ಳುತ್ತಾನೆ: ''ಭಗವಂತನೇ, ನಿಮ್ಮಂಥ ಮಹನೀಯರಿಂದ ಒಂದು ವಿಷಯವನ್ನು ಅರಿತಿದ್ದೇನೆ. ಅದೇನೆಂದರೆ, ಆತ್ಮವನ್ನು ತಿಳಿದವನು ಮಾತ್ರವೇ ಮನಸ್ಸಿನ ಸಂತಾಪವನ್ನು, ಅಂದರೆ 'ಅಯ್ಯೋ, ನಾನು ಕೃತಾರ್ಥನಾಗಿಲ್ಲವಲ್ಲ' ಎಂಬ ದಯನೀಯ ಸ್ಥಿತಿಯನ್ನು ದಾಟಿಹೋಗುತ್ತಾನೆ, ಮೀರಿಹೋಗುತ್ತಾನೆ ಎಂದು ಕೇಳಿತಿಳಿದಿದ್ದೇನೆ. ಮಹನೀಯರೇ, ಅಂಥ ಶೋಕವು ನನ್ನನ್ನು ಕಾಡುತ್ತಿದೆ. ನಾನು ಸಂತಾಪಗೊಂಡಿದ್ದೇನೆ. ದಯವಿಟ್ಟು ಆತ್ಮಜ್ಞಾನವೆಂಬ ದೋಣಿಯಿಂದ ನನ್ನನ್ನು ಈ ಶೋಕಸಾಗರದ ಆಚೆಯ ದಡಕ್ಕೆ ದಾಟಿಸಿರಿ. ನನ್ನಲ್ಲಿ ಕೃತಾರ್ಥಬುದ್ಧಿಯನ್ನು ಉಂಟುಮಾಡಿರಿ. ದಯವಿಟ್ಟು ನನ್ನ ಭಯವನ್ನು ಹೋಗಲಾಡಿಸಿ, ಅಭಯಪ್ರದಾನವನ್ನು ಮಾಡಿರಿ.''

### ನಾಮೋಪಾಸನೆ

ಈಗ ಸನತ್ಕುಮಾರನು ಬಹಳ ವಿಶಿಷ್ಟವಾಗಿ ತನ್ನ ಉಪದೇಶವನ್ನು ಆರಂಭಿಸುತ್ತಾನೆ: ''ಮಗೂ, ನಾರದ, ನೀನು ಇದುವರೆಗೆ

ಅಧ್ಯಯನ ಮಾಡಿ, ಅರಿತುಕೊಂಡಿರುವುದೆಲ್ಲವೂ ಬರೀ ಹೆಸರು, ಬರೀ ನಾಮಧೇಯ. ಮಗೂ, ನೀನು ಓದಿಕೊಂಡಿರುವ ಋಗ್ವೇದವೂ ಹೆಸರೇ, ಯಜುರ್ವೇದವೂ ಹೆಸರೇ, ಸಾಮವೇದ ಮತ್ತು ಅಥರ್ವಣ ವೇದಗಳು ಕೂಡ ಹೆಸರೇ ಆಗಿವೆ. ಅದೇ ರೀತಿ ನೀನು ಪಟ್ಟಿಮಾಡಿದ, ನೀನು ಕಲಿತುಕೊಂಡಿರುವ ಎಲ್ಲ ವಿದ್ಯೆಗಳೂ ಬರಿಯ ಹೆಸರುಗಳು ಮಾತ್ರವೇ ಆಗಿವೆ. ಮಗೂ, ನಾನು ನಿನಗೆ ಒಂದು ಸಾಧನಾವಿಧಾನವನ್ನು ಹೇಳಿಕೊಡುತ್ತೇನೆ. **'ಏತತ್ ನಾಮ ಉಪಾಸ್ವ'** — ಆ ನಾಮ ಅಥವಾ ಹೆಸರೇ ಬ್ರಹ್ಮವು ಎಂಬ ಭಾವನೆಯಿಂದ ಅದರ ಉಪಾಸನೆ ಮಾಡು. ಮಗೂ, ಈ ರೀತಿ ನಾಮೋಪಾಸನೆ ಮಾಡುವವನು ಹೆಸರಿನ ವಿಷಯದಲ್ಲಿ ಸ್ವತಂತ್ರನಾಗಿ ಇರುತ್ತಾನೆ. ಎಲ್ಲ ಹೆಸರುಗಳೂ ಅವನದೇ ಆಗಿಬಿಡುತ್ತವೆ. ಇದೇ ನಾಮವನ್ನು ಬ್ರಹ್ಮವೆಂದು ಉಪಾಸನೆ ಮಾಡಿದರೆ ಸಿಗುವ ಫಲ.''

ಆಗ ನಾರದನು ಹೀಗೆ ಪ್ರಶ್ನೆ ಮಾಡುತ್ತಾನೆ: ''ಭಗವಂತನೇ, ಈ ಹೆಸರು ಎಂಬುದಕ್ಕಿಂತ ಹೆಚ್ಚಿನದು ಏನಾದರೂ ಇದೆಯೆ?'' ಬ್ರಹ್ಮವೆಂದು ಇದಕ್ಕಿಂತಲೂ ಹೆಚ್ಚಾಗಿರುವುದು ಯಾವುದಾದರೂ ಒಂದನ್ನು ಉಪಾಸನೆ ಮಾಡಬಹುದೇ ಎಂದು ಇದರ ಅರ್ಥ. ಇದಕ್ಕೆ ಸನತ್ಕುಮಾರನು, ''ಇದ್ದೇ ಇದೆ'' ಎನ್ನುತ್ತಾನೆ. ''ಹಾಗಾದರೆ, ಭಗವಂತನು ಅದನ್ನು ನನಗೆ ಹೇಳಬೇಕು'' ಎಂದು ನಾರದನು ಕೇಳಿಕೊಳ್ಳುತ್ತಾನೆ.

### ವಾಕ್ ಉಪಾಸನೆ

ಸನತ್ಕುಮಾರನು ತಮ್ಮ ಉಪದೇಶವನ್ನು ಮುಂದುವರೆಸುತ್ತಾನೆ: ''ಮಗೂ, ನಾರದ, ಬರಿಯ ಹೆಸರಿಗಿಂತ ಮಾತೆನ್ನುವುದು ಹೆಚ್ಚಿನದು. ಇದನ್ನು **ವಾಕ್** ಎಂದು ಕರೆಯುತ್ತಾರೆ. ಮಾತು ಮಾತ್ರವೇ ನೀನು ಈಗಾಗಲೇ ಅರಿತ ಋಗ್ವೇದವನ್ನು ತಿಳಿಸಿಕೊಡುತ್ತದೆ; ಈ ಮಾತೇ ಉಳಿದ ವೇದಗಳಿಗೆ ಆಧಾರವಾಗಿದೆ. ತಂದೆಯು ಮಗನಿಗಿಂತ ಹೆಚ್ಚಿನವನು ತಾನೆ? ಇದೇ ರೀತಿಯಲ್ಲಿ ಕಾರಣವು ಕಾರ್ಯಕ್ಕಿಂತ ಹೆಚ್ಚಿನದು. ಎಲ್ಲದಕ್ಕೂ ಕಾರಣ ಈ ವಾಕ್. ವಾಕ್ ಎನ್ನುವುದೇ ಋಗ್ವೇದವನ್ನು, 'ಇದು ಋಗ್ವೇದ' ಎಂದು ತಿಳಿಸಿಕೊಡುತ್ತದೆ. ಇದರಂತೆ ಯಜುರ್ವೇದವನ್ನು 'ಇದು ಯಜುರ್ವೇದ' ಎಂದು ತಿಳಿಸಿಕೊಡುತ್ತದೆ. ವಾಕ್ ಇಲ್ಲದಿದ್ದರೆ, ಧರ್ಮ, ಅಧರ್ಮಗಳು ತಿಳಿಯಬರುತ್ತಿರಲಿಲ್ಲ. ವಾಕ್ ಇಲ್ಲದಿದ್ದರೆ ಅಧ್ಯಯನವೂ ಇಲ್ಲ. ಅಧ್ಯಯನವನ್ನು ಮಾಡದಿದ್ದರೆ ವೇದಗಳ ಅರ್ಥವು ತಿಳಿಯಬರುವುದಿಲ್ಲ. ವೇದಾರ್ಥವು ತಿಳಿಯಬರದಿದ್ದರೆ ಧರ್ಮ, ಅಧರ್ಮಗಳ ತಿಳಿವಳಿಕೆ ಉಂಟಾಗುವುದಿಲ್ಲ. ಅಷ್ಟುಮಾತ್ರವೇ ಅಲ್ಲ, ಸತ್ಯ-ಸುಳ್ಳು, ಒಳ್ಳೆಯದು-ಕೆಟ್ಟದ್ದು, ಹೃದಯಕ್ಕೆ ಮೆಚ್ಚುಗೆಯಾಗಿರುವುದು, ಆಗದೇ ಇರುವುದು - ಎಲ್ಲಕ್ಕೂ ವಾಕ್ ಮಾತ್ರವೇ ಮೂಲ ಆಕರವಾಗಿದೆ, ಸ್ರೋತವಾಗಿದೆ. ವಾಕ್ ಇಲ್ಲದಿದ್ದರೆ, ಅವು ಯಾವುದಕ್ಕೂ ಅರ್ಥವೇ ಇರುತ್ತಿರಲಿಲ್ಲ. ಆದ್ದರಿಂದ ವಾಕ್ ಎಲ್ಲದಕ್ಕೂ ಮೂಲಾಧಾರವಾಗಿದೆ. ಆದ್ದರಿಂದ ಓ ನಾರದ, ಈ ವಾಕ್ ಅನ್ನು ಬ್ರಹ್ಮವೆಂದು ಉಪಾಸನೆ ಮಾಡು.''

ಸನತ್ಕುಮಾರನು ಈ ಉಪಾಸನೆಯ ಫಲವನ್ನೂ ಹೇಳುವನು: ''ನಾರದ, ಯಾರು ಈ ವಾಕ್ ಅನ್ನು ಬ್ರಹ್ಮನೆಂದು ಉಪಾಸನೆ ಮಾಡುತ್ತಾರೆಯೋ, ಎಲ್ಲೆಲ್ಲಿ ವಾಕ್ ಇರುತ್ತದೆಯೋ, ಅಲ್ಲೆಲ್ಲ ಅವರು ಇಷ್ಟಪಟ್ಟದ್ದು ಸಿಗುತ್ತದೆ; ಅವರು ಇಷ್ಟಪಟ್ಟಂತೆ ನಡೆದುಕೊಳ್ಳಬಹುದು.''

ಹಿಂದಿನಂತೆಯೇ ನಾರದನು ಮತ್ತೂ ಕೇಳಿದನು: ''ಭಗವಂತನೇ, ವಾಕ್‌ಗಿಂತಲೂ ಹೆಚ್ಚಿನದು ಯಾವುದಾದರೂ ಇದೆಯೆ?'' ಸನತ್ಕುಮಾರನು ಉತ್ತರಿಸಿದನು: ''ಖಂಡಿತ, ನಾರದ'' ಎಂದು. ನಾರದನು ಹೀಗೆ ಪ್ರಾರ್ಥಿಸುತ್ತಾನೆ: ''ಹಾಗಾದರೆ ದಯವಿಟ್ಟು ಅದನ್ನು ನನಗೆ ಉಪದೇಶ ಮಾಡಬೇಕು.'' ''ಹಾಗೇ ಆಗಲಿ, ನಾರದ'' ಎಂದು ಸನತ್ಕುಮಾರನು ಉತ್ತರಿಸುತ್ತಾನೆ.

### ಮನೋಪಾಸನೆ

ಮುಂದೆ ವಾಕ್‌ಗಿಂತಲೂ ಮನಸ್ಸು ಹೆಚ್ಚಿನದು ಎಂದು ಸನತ್ಕುಮಾರನು ಉಪದೇಶಿಸುತ್ತಾನೆ. ''ಮಾತಿನ ಶಕ್ತಿಗಿಂತ ಮನಸ್ಸಿನ ಶಕ್ತಿಯು ಹೆಚ್ಚು. ಮನಸ್ಸಿದ್ದರೆ ತಾನೇ ಮಾತನಾಡಲು ಸಾಧ್ಯ? ಮನಸ್ಸು ಹೇಳಿದಂತೆ ತಾನೇ ಮಾತು ಉಚ್ಚರಿಸುತ್ತದೆ? ಹೀಗಾಗಿ ಮಾತೆಂಬುದು ಮನಸ್ಸಿನಲ್ಲಿ ಅಡಕವಾಗಿರುತ್ತದೆ ಎಂದು ಆಚಾರ್ಯನು ತಿಳಿಸಿಕೊಡುತ್ತಾನೆ. ಮನಸ್ಸು ಮಾತಿಗಿಂತ ವ್ಯಾಪಕವಾದುದು. ಎರಡು ನೆಲ್ಲಿಕಾಯಿಗಳೋ, ಎಗಚಿ ಕಾಯಿಗಳೋ ಅಥವಾ ಇನ್ನಾವುದೇ ಕಾಯಿಗಳಿವೆ ಎಂದುಕೋ. ಕೈಗಳನ್ನು ಮುಷ್ಟಿಮಾಡಿ ಅವನ್ನು ಹಿಡಿದುಕೊಳ್ಳಬಹುದು, ಅಲ್ಲವೆ? ಕೈಯ ಮುಷ್ಟಿಯು ಅವೆರಡು ಕಾಯಿಗಳನ್ನೂ ವ್ಯಾಪಿಸಿಕೊಂಡಿರುತ್ತದೆ. ಹಾಗೆಯೇ ಮನಸ್ಸು ಕೂಡ ಮಾತನ್ನು ವ್ಯಾಪಿಸಿಕೊಂಡಿದೆ. ನೆಲ್ಲಿಕಾಯಿ ಮುಂತಾದವುಗಳನ್ನು ಕೈಯ ಮುಷ್ಟಿಯು ಅನುಭವಿಸುತ್ತದೆ, ಅಂದರೆ ನೆಲ್ಲಿಕಾಯಿ ಇರುವುದು ಮುಷ್ಟಿಯ ಅರಿವಿಗೆ ಬರುತ್ತದೆ. ಅದೇ ರೀತಿ, ಮಾತು ಆಡುವುದೆಲ್ಲವೂ ಅರಿವಿಗೆ ಅಥವಾ ಪರಿಜ್ಞಾನಕ್ಕೆ ಬರಬೇಕಾದರೆ ಮನಸ್ಸು ಇರಲೇಬೇಕು. ಮನಸ್ಸಿನಲ್ಲದೆ ಮಾತು ಇರಲು ಸಾಧ್ಯವಿಲ್ಲ. ಮಾತಿನ ಅರ್ಥವನ್ನು ಗ್ರಹಿಸುವುದೇ ಮನಸ್ಸು.

''ಮಗೂ, ಇದು ಸರಳ ಮನೋವೈಜ್ಞಾನಿಕ ಸತ್ಯ. ಮೊದಲು ಯಾವುದೇ ಮನುಷ್ಯನು ಮನಸ್ಸಿನಲ್ಲಿ 'ಹೀಗೆ ಮಾಡಬೇಕು, ಹಾಗೆ ಮಾಡಬಾರದು' ಎಂದೆಲ್ಲ ಅಂದುಕೊಳ್ಳುತ್ತಾನೆ, ಅಲ್ಲವೇ. ಅದೇರೀತಿ, 'ನಾನು ಮಂತ್ರಗಳನ್ನು ಹೇಳಬೇಕು' ಎಂಬ ಮಾನಸಿಕ ಕ್ರಿಯೆ ಮಾತ್ರವೇ ಅವನನ್ನು ಮಂತ್ರಗಳನ್ನು ಉಚ್ಚರಿಸುವಂತೆ ಮಾಡುತ್ತದೆ. ಹೀಗೆಯೇ ಪುತ್ರರನ್ನು ಪಡೆಯುವೆನು, ಲೋಕಗಳನ್ನು ಪಡೆಯುವೆನು ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿ

ಕೊಂಡು, ತದನಂತರವಷ್ಟೇ ಅದಕ್ಕೆ ಬೇಕಾದ ಸಾಧನೆಯನ್ನು ಮಾಡುತ್ತಾನೆ. ಹೀಗಾಗಿ ಮನಸ್ಸೇ ಆತ್ಮ. ಮನಸ್ಸಿದ್ದರೆ, ಕಾರ್ಯವನ್ನು ಮಾಡುವ ಕರ್ತೃತ್ವ ಭಾವನೆ ಬರುತ್ತದೆ; ಭೋಗಿಸುವ ಭೋಕ್ತೃತ್ವ ಭಾವನೆ ಬರುತ್ತದೆ. ಹೀಗಾಗಿ ಮನಸ್ಸೇ ಬ್ರಹ್ಮ. ಏಕೆಂದರೆ ಮನಸ್ಸು ಇದ್ದರೆ ಮಾತ್ರವೇ, ಲೋಕಗಳೂ, ಲೋಕಗಳನ್ನು ಸೇರುವ ಆಸೆಯೂ ಉಂಟಾಗುತ್ತದೆ. ಹೀಗಾಗಿ, ಮಗೂ, ನಾರದ, ಮನಸ್ಸೇ ಬ್ರಹ್ಮವೆಂದು ಉಪಾಸನೆ ಮಾಡು.

''ಈ ಮನೋಪಾಸನೆಯ ಫಲ ಏನು ಗೊತ್ತೆ? ಮನಸ್ಸು ಎಲ್ಲೆಲ್ಲಿ ಇರುತ್ತದೆಯೋ, ಅಲ್ಲೆಲ್ಲ, ಸಾಧಕನು ತಾನು ಇಷ್ಟಪಟ್ಟಿದ್ದನ್ನು ಪಡೆದುಕೊಳ್ಳುತ್ತಾನೆ, ಇಷ್ಟಬಂದ ಕಡೆ ಹೋಗುತ್ತಾನೆ.'' ನಾರದನಿಗೆ ಮತ್ತೆ ಸಂದೇಹ. ''ಗುರುಗಳೇ, ಮನಸ್ಸಿಗಿಂತ ಹೆಚ್ಚಿನದು ಇದೆಯೆ?'' ಸನತ್ಕುಮಾರನು, ''ಖಂಡಿತ ಹೌದು'' ಎನ್ನುತ್ತಾನೆ. ''ಹಾಗಾದರೆ ಅದನ್ನು ನನಗೆ ಉಪದೇಶಿಸಬೇಕು'' ಎಂದು ನಾರದನು ಕೇಳಿಕೊಳ್ಳುತ್ತಾನೆ.

## ಇನ್ನೂ ಹೆಚ್ಚಿನ ಉಪಾಸನೆಗಳು

**ಸಂಕಲ್ಪೋಪಾಸನೆ :** ಹೀಗೆ ಉಪದೇಶಗಳು ಮುಂದುವರಿಯುತ್ತವೆ. ಮನಸ್ಸಿಗಿಂತ ಹೆಚ್ಚಿನದು ಸಂಕಲ್ಪವೆಂದು ಸನತ್ಕುಮಾರನು ಹೇಳುತ್ತಾನೆ. ಮನಸ್ಸು ಹುಟ್ಟುವುದು ಸಂಕಲ್ಪದಲ್ಲಿ, ಮನಸ್ಸಿನ ಆಶ್ರಯವೂ ಸಂಕಲ್ಪವೇ. ಮನಸ್ಸಿನ ಪ್ರಲಯಸ್ಥಾನವೂ ಸಂಕಲ್ಪವೇ. ಸಂಕಲ್ಪವು ಅವ್ಯಕ್ತವಾಗಿ ಇರುತ್ತದೆ. ಅದರಲ್ಲಿ ಮನಸ್ಸು, ವಾಕ್ ಮತ್ತು ನಾಮ – ಇವೆಲ್ಲ ಅಡಗುತ್ತವೆ. ದ್ಯುಲೋಕ, ಪೃಥಿವೀಲೋಕಗಳ ಸಂಕಲ್ಪದಿಂದಲೇ ಮಳೆಯು ಬರುತ್ತದೆ. ಮಳೆಯು ಸಂಕಲ್ಪಿಸುವುದರಿಂದಲೇ ಅಹಾರವು ಉತ್ಪತ್ತಿಯಾಗುತ್ತದೆ. ಪ್ರಾಣ ನಿಂತಿರುವುದೇ ಆಹಾರದಿಂದ. ಪ್ರಾಣಗಳು ಸಂಕಲ್ಪಿಸುವುದರಿಂದ ಮಂತ್ರಗಳ ಉಚ್ಚಾರ ಸಾಧ್ಯ. ಇದರಿಂದಲೇ ಅಗ್ನಿಹೋತ್ರ ಮುಂತಾದ ಆಚರಣೆಗಳು ಸಾಧ್ಯವಾಗುತ್ತವೆ. ಈ ಆಚರಣೆಗಳಿಂದ ದೇವತೆಗಳು ತುಷ್ಟರಾಗುತ್ತಾರೆ. ಮಳೆಯನ್ನು ಸುರಿಸುತ್ತಾರೆ. ವಾಯು, ಆಕಾಶ – ಇವೆಲ್ಲವೂ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುವುದು ಸಂಕಲ್ಪದಿಂದಲೇ. ಹೀಗೆ ಎಲ್ಲವೂ ಸಂಕಲ್ಪದಿಂದಲೇ ಸಾಧ್ಯವಾಗುವುದು. ಹೀಗಾಗಿ ಸಂಕಲ್ಪವೇ ಬ್ರಹ್ಮವೆಂದು ಉಪಾಸನೆ ಮಾಡಬೇಕು.

**ಚಿತ್ತೋಪಾಸನೆ :** ಚಿತ್ತವು ಸಂಕಲ್ಪಕ್ಕಿಂತ ಹೆಚ್ಚಿನದು. ಚಿತ್ತವೆಂದರೆ ಅರಿಯುವುದು; ಯಾವುದೇ ಸಂಗತಿಯನ್ನು ಕಾಲ, ರೂಪ – ಇವುಗಳಿಗೆ ಅನುಗುಣವಾಗಿ ಅರ್ಥಮಾಡಿಕೊಳ್ಳುವುದು. ಸಂಕಲ್ಪವು ಹುಟ್ಟಿರುವುದು ಈ ಚಿತ್ತದಿಂದಲೇ. ಇರುವದೂ ಚಿತ್ತದಿಂದಲೇ. ಚಿತ್ತದಲ್ಲೇ ಸಂಕಲ್ಪವು ಪ್ರಲಯ ಹೊಂದುತ್ತದೆ. ಚಿತ್ತವೇ ಸಂಕಲ್ಪಕ್ಕೆ ಮೂಲ. ಶಾಸ್ತ್ರಗಳ ತಿಳಿವಳಿಕೆ ಇದ್ದೂ, ತನಗೆ ಬಂದೊದಗಿದ್ದನ್ನು ಅರಿತುಕೊಳ್ಳುವ ಸಾಮರ್ಥ್ಯ ಇಲ್ಲದಿದ್ದರೆ, ಅಂಥವನು ಜೀವನದಲ್ಲಿ ಯಶಸ್ಸು ಹೊಂದುವುದಿಲ್ಲ. ಅವನ ಶಾಸ್ತ್ರಜ್ಞಾನ ವ್ಯರ್ಥವಾದುದು ಎಂದು ಜನರು ಹೇಳುತ್ತಾರೆ. ಆದ್ದರಿಂದ ಚಿತ್ತ ಅಥವಾ ಅರಿವು ಬಹಳ ಮುಖ್ಯವಾದುದು. ಇದರ ಬದಲಾಗಿ, ಸ್ವಲ್ಪ ಓದಿಕೊಂಡವನೂ, ಚಿತ್ತವಂತನಾಗಿದ್ದರೆ, ಅವನು ತನ್ನ ಬಳಿಗೆ ಬಂದುದೆಲ್ಲವನ್ನೂ ಚೆನ್ನಾಗಿ ಅರಿತುಕೊಳ್ಳುತ್ತಾನೆ. ಹೀಗಾಗಿ ಚಿತ್ತವೇ ಎಲ್ಲದಕ್ಕೂ ಮೂಲವಾಗಿದೆ. ಹೀಗೆ ಚಿತ್ತವನ್ನು ಬ್ರಹ್ಮ ಎಂದು ಉಪಾಸನೆ ಮಾಡಬೇಕು.

**ಧ್ಯಾನೋಪಾಸನೆ:** ಚಿತ್ತಕ್ಕಿಂತಲೂ ಧ್ಯಾನವೇ ಹೆಚ್ಚಿನದು. ಧ್ಯಾನವೆಂದರೆ ಶಾಸ್ತ್ರದಲ್ಲಿ ಹೇಳಿರುವ ಹಾಗೆ ದೇವತೆಗಳು ಮುಂತಾದ ಕೆಲವು ಧ್ಯೇಯವಸ್ತುಗಳಲ್ಲಿ (ಆಲಂಬನ) ನಿಶ್ಚಲವಾಗಿ, ಬೇರೆಯ ಜಾತಿಯ ಆಲೋಚನೆಗಳು ಬರದಂತೆ, ಹರಿಯುವ ಪ್ರತ್ಯಯಪ್ರವಾಹ ಅಥವಾ ಆಲೋಚನೆಗಳ ಪ್ರವಾಹ. ಇದನ್ನೇ ಏಕಾಗ್ರತೆ ಎನ್ನುತ್ತಾರೆ. ಧ್ಯಾನ ಮಾಡುವಾಗ ಯೋಗಿಯು ನಿಶ್ಚಲವಾಗಿ ಇರುತ್ತದೆ. ಪೃಥಿವಿಯೂ ಧ್ಯಾನಮಾಡುವಂತೆ ನಿಶ್ಚಲವಾಗಿರುತ್ತದೆ; ಅಂತರಿಕ್ಷವು ಕೂಡ ಧ್ಯಾನಮಾಡುವಂತೆ ನಿಶ್ಚಲವಾಗಿರುತ್ತದೆ. ದ್ಯುಲೋಕವು ಧ್ಯಾನಮಾಡುತ್ತಿರುವಂತಿದೆ; ಪರ್ವತಗಳು ಧ್ಯಾನ ಮಾಡುತ್ತಿರುವಂತಿದೆ. ಜೀವನದಲ್ಲಿ ಹಣ, ವಿದ್ಯೆ, ಉದಾತ್ತಗುಣಗಳು – ಇವುಗಳಿಂದ ಯಶಸ್ಸನ್ನು ಜನರು ಪಡೆಯುತ್ತಾರೆ. ಇದೆಲ್ಲವೂ ಏಕಾಗ್ರತೆಯ ಅಥವಾ ಧ್ಯಾನದ ಫಲವೇ ಆಗಿದೆ. ಧ್ಯಾನವು ನಿಶ್ಚಲಭಾವವನ್ನು ಉಂಟುಮಾಡುತ್ತದೆ. ಜೀವನದಲ್ಲಿ ದೊಡ್ಡ ದೊಡ್ಡ ಸ್ತರವನ್ನು ತಲುಪಿರುವ ರಾಜರು, ಆಚಾರ್ಯರು, ಸಂಪತ್ತಿನ ಒಡೆಯರು – ಇವರೆಲ್ಲರೂ ಧ್ಯಾನವು ತಂದುಕೊಡುವ ನಿಶ್ಚಲಭಾವವನ್ನು ಮೈಗೂಡಿಸಿಕೊಂಡವರೇ ಆಗಿರುತ್ತಾರೆ. ಈ ಧ್ಯಾನವನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು ಏಕೆಂದರೆ, ಏಕಾಗ್ರತೆಯೇ ಜೀವನದಲ್ಲಿ ಎಲ್ಲಕ್ಕೂ ಮೂಲವಾಗಿದೆ.

**ವಿಜ್ಞಾನೋಪಾಸನೆ :** ಧ್ಯಾನಕ್ಕಿಂತ ಹೆಚ್ಚಿನದು ವಿಜ್ಞಾನ. ವಿಜ್ಞಾನವೆಂದರೆ ಶಾಸ್ತ್ರಜ್ಞಾನ. ಶಾಸ್ತ್ರಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳುವುದರಿಂದಲೇ ಧ್ಯಾನವು ಉಂಟಾಗುತ್ತದೆ. ಶಾಸ್ತ್ರಗ್ರಂಥಗಳ ಅಧ್ಯಯನವು ಮನಸ್ಸಿಗೆ ಪರಿಪಕ್ವತೆಯನ್ನು ನೀಡುತ್ತದೆ. ಇಂಥ ಮಾನಸಿಕ ಸ್ಥಿತಿಯು ಧ್ಯಾನಕ್ಕೆ ನಮ್ಮನ್ನು ಅನುವು ಮಾಡುತ್ತದೆ. ಶಾಸ್ತ್ರಕ್ಕೆ ಸಂಬಂಧಪಟ್ಟ ಧರ್ಮ–ಅಧರ್ಮಗಳನ್ನೂ, ಲೌಕಿಕ ವಿಷಯದಲ್ಲಿ ಮಾಡಬೇಕಾದ್ದು–ಮಾಡಬಾರದ್ದು — ಈ ವಿಷಯಗಳನ್ನು ಒಬ್ಬನು ಅರಿಯುವುದು ಶಾಸ್ತ್ರಜ್ಞಾನದ ಮೂಲಕವೇ. ಈ ವಿಜ್ಞಾನ ಅಥವಾ ಶಾಸ್ತ್ರಜ್ಞಾನವನ್ನು ನಾವು ಬ್ರಹ್ಮನೆಂದು ಉಪಾಸನೆ ಮಾಡಬೇಕು.

**ಬಲೋಪಾಸನೆ :** ಈ ವಿಜ್ಞಾನಕ್ಕಿಂತ ಹೆಚ್ಚಿನದು ಬಲ. ಬಲವೆಂದರೆ ನಾವು ಯಾವ ವಿಷಯದಲ್ಲಿ ಜ್ಞಾನವನ್ನು ಪಡೆದುಕೊಳ್ಳಬೇಕೆಂದು ಬಯಸುತ್ತೇವೆಯೋ, ಆ ವಿಷಯದಲ್ಲಿ ಮನಸ್ಸು ಹೊಳೆಯುವ ಸಾಮರ್ಥ್ಯ. ಇದು ಆಹಾರ ಸೇವನೆಯಿಂದ

ಉಂಟಾಗುತ್ತದೆ. ಶರೀರ ಬಲವೂ ಇದರ ಒಂದು ಬಗೆಯೇ. ವಿಜ್ಞಾನವಂತರಾದ ಹಲವು ಜನರನ್ನು ಬಲವಂತನಾದ ಒಬ್ಬನೇ ವ್ಯಕ್ತಿ ಮಣಿಸಬಲ್ಲ. ಬಲವುಳ್ಳವನು ಕೆಲಸಕಾರ್ಯಗಳಲ್ಲಿ, ಸೇವೆಯಲ್ಲಿ ನಿಷ್ಣಾತನಾಗಿರುತ್ತಾನೆ. ಅಂಥವನು ಗುರುಗಳಿಗೆ, ಹಿರಿಯರಿಗೆ ಪ್ರಿಯನಾಗುತ್ತಾನೆ. ಏಕಾಗ್ರತೆಯಿಂದ ಗುರುಗಳ ಉಪದೇಶವನ್ನು ಕೇಳುವ, ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಅವನಿಗೆ ಬರುತ್ತದೆ. ಗುರುಗಳ ಉಪದೇಶವನ್ನು ಚೆನ್ನಾಗಿ ಮನನ ಮಾಡುವ ಸಾಮರ್ಥ್ಯವೂ ಅವನಿಗೆ ಉಂಟಾಗುತ್ತದೆ. ಹೀಗಾಗಿ ಬಲವನ್ನು ಬ್ರಹ್ಮನೆಂದು ಉಪಾಸನೆ ಮಾಡಬೇಕು.

**ಅನ್ನೋಪಾಸನೆ :** ಬಲಕ್ಕಿಂತ ಹೆಚ್ಚಿನದು ಅನ್ನ ಅಥವಾ ಆಹಾರ. ಆಹಾರವೇ ಬಲಕ್ಕೆ ಕಾರಣ. ಹತ್ತು ರಾತ್ರಿಗಳ ಕಾಲ ಒಬ್ಬನು ಊಟ ಮಾಡದಿದ್ದರೆ, ಬಲವನ್ನು ಕಳೆದುಕೊಳ್ಳುತ್ತಾನೆ. ಅವನು ಬದುಕಿರಬಹುದು, ಆದರೆ ಗುರುವಿನ ಉಪದೇಶವು ಅವನಿಗೆ ತಲೆಗೆ ಹತ್ತುವುದೇ ಇಲ್ಲ. ಹಾಗೆಯೇ ಯಾವುದೇ ದೈಹಿಕ ಕ್ರಿಯೆಗಳಲ್ಲಿ ಅವನು ತೊಡಗಿಸಿಕೊಳ್ಳಲಾರನು. ಹೀಗಾಗಿ ಅನ್ನ ಅಥವಾ ಆಹಾರವೇ ಎಲ್ಲಕ್ಕೂ ಮೂಲ. ಹೀಗಾಗಿ ಅನ್ನ ಅಥವಾ ಆಹಾರವನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು.

**ಜಲೋಪಾಸನೆ :** ನೀರು ಆಹಾರಕ್ಕಿಂತ ಹೆಚ್ಚಿನದು. ಆಹಾರ ಉಂಟಾಗುವುದಕ್ಕೆ ಕಾರಣವೇ ಅದು. ಮಳೆ ಚೆನ್ನಾಗಿ ಬಿದ್ದರೆ ತಾನೇ ಸಸ್ಯಗಳು ಬೆಳೆಯುವುದು! ಸಸ್ಯಗಳಿಂದಲೇ ನಮಗೆ ಆಹಾರ ಉತ್ಪತ್ತಿಯಾಗುವುದು. ಮಳೆಯು ಕಡಿಮೆಯಾದಾಗ, ಆಹಾರದ ಉತ್ಪತ್ತಿ ಕಡಿಮೆಯಾಗುತ್ತದೆ. ಬರ ಬರುತ್ತದೆ. ಇದರಿಂದ ಜೀವಿಗಳಿಗೆ ಆಹಾರ ಇಲ್ಲದಾಗುತ್ತದೆ. ಅವರೆಲ್ಲ ದುಃಖಿತರಾಗುತ್ತಾರೆ. ಹೀಗಾಗಿ ನೀರು ಎಲ್ಲಕ್ಕೂ ಮೂಲವಾಗಿದೆ. ನೀರಿಲ್ಲದೆ ಯಾವುದೂ ಸಾಧ್ಯವಿಲ್ಲ. ಹೀಗಾಗಿ ಆಪ ಅಥವಾ ನೀರನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು.

**ತೇಜೋಪಾಸನೆ :** ನೀರಿಗಿಂತಲೂ ತೇಜಸ್ಸು ಅಥವಾ ಅಗ್ನಿತತ್ತ್ವವೇ ಹೆಚ್ಚಿನದು. ಪಂಚಭೂತಗಳ ಕ್ರಮದಲ್ಲಿ ತೇಜಸ್ಸಿನಿಂದಲೇ ಜಲವು ಉದ್ಭವಿಸಿರುವುದು. ಮಳೆಯಾಗುವುದಕ್ಕೆ ಮುಂಚೆ ಇಡೀ ವಾತಾವರಣ ಸ್ವಲ್ಪ ಶಾಖವಾಗುವುದು. ಇದಕ್ಕೆ ಕಾರಣ ತೇಜಸ್ಸು. ಅದು ವಾಯುವು ಬೀಸದಂತೆ ಹಿಡಿದು ನಿಲ್ಲಿಸುತ್ತದೆ. ಆಕಾಶದಲ್ಲಿ ಉಷ್ಣವನ್ನು ಹೆಚ್ಚು ಮಾಡುತ್ತದೆ. ಆಗ ಜನರು ಹೀಗೆ ಹೇಳುತ್ತಾರೆ, ಬಹಳ ಸೆಕೆಯಾಗುತ್ತಿದೆ. ದೇಹ ಬಹಳವಾಗಿ ಸುಡುತ್ತಿದೆ. ಖಂಡಿತ ಮಳೆಯು ಆಗಿಯೇ ತೀರುತ್ತದೆ ಎಂದು. ಹೀಗಾಗಿ ಜನಸಾಮಾನ್ಯರಿಗೂ ಗೊತ್ತಿದೆ, ಮಳೆಗೆ ತೇಜಸ್ಸೇ ಕಾರಣ ಎಂದು. ಇದಲ್ಲದೆ, ಈ ತೇಜಸ್ಸೇ ಮಿಂಚಿನ ರೂಪ ತಾಳುತ್ತದೆ. ಗುಡುಗು ಮಿಂಚುಗಳು ಬಂದಮೇಲೆ ಮಳೆ ಆರಂಭವಾಗುತ್ತದೆ. ಈ ರೀತಿಯಲ್ಲಿ ಎಲ್ಲ ಕಡೆ ತೇಜಸ್ಸೇ ಮೊದಲು ಕಾಣಿಸಿಕೊಂಡು, ಅನಂತರ ಜಲವನ್ನು ಸೃಷ್ಟಿಸುತ್ತದೆ. ಹೀಗಾಗಿ ನೀರಿಗೆ ಕಾರಣವಾಗಿರುವುದರಿಂದ, ತೇಜಸ್ಸೇ ಹೆಚ್ಚಿನದು. ಈ ತೇಜಸ್ಸನ್ನು ಬ್ರಹ್ಮನೆಂದು ಉಪಾಸನೆ ಮಾಡಬೇಕು.

**ಆಕಾಶೋಪಾಸನೆ:** ತೇಜಸ್ಸಿಗಿಂತಲೂ ಹೆಚ್ಚಿನದು ಆಕಾಶ. ವಾಯು ಮತ್ತು ತೇಜಸ್ಸುಗಳಿಗೆ ಆಕಾಶವೇ ಕಾರಣ. ಆಕಾಶದಲ್ಲಿಯೇ ಸೂರ್ಯಚಂದ್ರರು ಸ್ಥಿತರಾಗಿದ್ದಾರೆ. ಮಿಂಚು, ನಕ್ಷತ್ರಗಳು, ಅಗ್ನಿ ದಹಿಸುವುದು – ಎಲ್ಲವೂ ಉಂಟಾಗುವುದು ಆಕಾಶದಲ್ಲಿಯೇ. ಇವೆಲ್ಲವೂ ಆಕಾಶದ ಒಳಗೇ ಉಂಟಾಗುತ್ತದೆ. ಯಾವುದು ಒಳಗಿದೆಯೋ ಅದು ಕಡಮೆಯದು. ಯಾವುದರ ಒಳಗೆ ಎಲ್ಲವೂ ಇರುವುದೋ ಅದೇ ಹೆಚ್ಚಿನದು. ಆಕಾಶದ ಒಳಗೆ ಎಲ್ಲವೂ ಅಂತರ್ಗತವಾಗಿದೆ. ಹೀಗಾಗಿ ಆಕಾಶವೇ ಹೆಚ್ಚಿನದು. ಆಕಾಶದಲ್ಲಿಯೇ ನಮ್ಮೆಲ್ಲ ಕೆಲಸಕಾರ್ಯಗಳು ನಡೆಯುತ್ತವೆ. ಎಲ್ಲದಕ್ಕೂ ಆಶ್ರಯವಾದುದು ಆಕಾಶವೇ ಆಗಿದೆ. ಹೀಗಾಗಿ ಆಕಾಶವನ್ನು ಬ್ರಹ್ಮನೆಂದು ಉಪಾಸನೆ ಮಾಡಬೇಕು.

**ಸ್ಮರಣೆ:** ಆಕಾಶಕ್ಕಿಂತ ಹೆಚ್ಚಿನದು ಸ್ಮರಣೆ. ಸ್ಮರಣೆ ಎಂದರೆ ನೆನಪಿಗೆ ತಂದುಕೊಳ್ಳುವ ಮನಸ್ಸಿನ ಗುಣ. ಇದು ಆಕಾಶಕ್ಕಿಂತ ಹೆಚ್ಚಿನದು. ಸ್ಮರಿಸುವವನಿಗೆ ಸ್ಮರಣೆ ಇದ್ದರೆ ತಾನೇ, ಆಕಾಶ ಮುಂತಾದ ಎಲ್ಲ ವಸ್ತುಗಳ ನೆನಪು ಉಂಟಾಗಲು ಸಾಧ್ಯ? ಸ್ಮರಣೆ ಇದ್ದರೆ ಮಾತ್ರವೇ ಅನುಭವ ಸಾಧ್ಯ. ಇಲ್ಲದಿದ್ದರೆ ಇದ್ದೂ ಇಲ್ಲದಂತೆ. ಸ್ಮರಣೆ ಇಲ್ಲದಿದ್ದರೆ ಆಕಾಶವು ಇದೆಯೇ, ಇಲ್ಲವೇ ಎನ್ನುವುದನ್ನು ನಿಶ್ಚಯಿಸುವುದು ಕೂಡ ಸಾಧ್ಯವಾಗದು. ಇದರಿಂದ ಸ್ಮರಣೆಯು ಆಕಾಶಕ್ಕಿಂತ ಹೆಚ್ಚಿನದು. ಹೀಗಾಗಿ ಸ್ಮರಣೆಯನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು.

ಇದಕ್ಕಿಂತಲೂ ಹೆಚ್ಚಿನದು ಇದೆಯೆ? ಖಂಡಿತ ಇದೆ. ಇದರ ವಿಚಾರವನ್ನು ಮುಂದಿನ ತಿಂಗಳ ಸಂಚಿಕೆಯಲ್ಲಿ ಮಾಡೋಣ.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು

ಬೆಳಿಗ್ಗೆ ಹಾಗೂ ಸಾಯಂಕಾಲ ಜಪ, ಧ್ಯಾನ ಮಾಡಲು ಕುಳಿತುಕೊಳ್ಳಬೇಕು. ಶಾಂತವಾದ ಮನಸ್ಸಿನಿಂದ ಜಪ, ಧ್ಯಾನ ಮಾಡು. ಇದು ಕಷ್ಟವಾದ ಕೆಲಸ. ಇದಕ್ಕೆ ಹೋಲಿಸಿದರೆ ಮಣ್ಣು ಅಗೆದು ಉಳುವುದೇ ಸುಲಭ.

ಕಾಲಕ್ರಮದಲ್ಲಿ ಮನಸ್ಸೇ ನಿನಗೆ ಗುರುವಾಗುವುದು, ಅನಂತರ ಉಪದೇಶ ನೀಡುವುದು.

ಯಾರಿಗೆ ಶ್ರೀರಾಮಕೃಷ್ಣರ ಕೃಪೆ ಲಭಿಸಿದೆಯೋ, ಅಥವಾ ಯಾರು ಅವರ ಸಂಪರ್ಕಕ್ಕೆ ಯಾವುದಾದರೂ ರೀತಿಯಲ್ಲಿ ಬಂದಿರುವರೋ ಅವರಿಗಾಗಿ ಶ್ರೀರಾಮಕೃಷ್ಣರು ಎಲ್ಲವನ್ನೂ ಮಾಡುವರು.

*('ಶ್ರೀಶಾರದಾದೇವಿ ವಚನವೇದ' ದಿಂದ)*